Doc-362
T.P-2

Reg No B G 155

(1)

27-8-1968

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೇಪೆಚ್ಚು ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 6

SATYAVADI Daily, MYSORE 4

ಸತ್ಯವಾದಿ

52 nd Year of Publication

ಸ್ಥಾಪಕರು : ಅರಮನೆ ಸರಸ್ತೀದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2ಪೈಸೆ

ಪಾಂಡಿಚೆರಿಯಲ್ಲಿ ಕಾಂಗ್ರೆಸಿನ ಬಹುಮತವಿಲ್ಲ

ಪಾಂಡಿಚೆರಿ ವಿಧಾನ ಸಭೆಯಲ್ಲಿ ಕಾಂಗ್ರೆಸ್ ಪಕ್ಷ ಬಹುಮತವನ್ನು ಕಳೆದುಕೊಂಡಿದೆ. ನಾಲ್ವರು ಕಾಂಗ್ರೆಸ್ ಸದಸ್ಯರು ಸಂಯುಕ್ತ ರಂಗವನ್ನು ಸೇರಿದರು. ಈ ಅಂಕವನ್ನು ಅಲ್ಲಿಯ ಸ್ಪೀಕರ್ ಶ್ರೀ ಮಾಣಿಕವೇಲು ರೆಡ್ಡಿಯಾರರು ಸಮರ್ಥಿಸಿದರು.

30 ಮಂದಿ ಶಾಸಕರು ಇರುವ ವಿಧಾನ ಸಭೆಯಲ್ಲಿ ಕಾಂಗ್ರೆಸ್ ಬಲ 15.

ಸ್ಪೀಕರರಿಗೆ ಸಂಬಂಧಿಸಿದಂತೆ ಉತ್ತಮ ಸಂಪ್ರದಾಯಗಳನ್ನು ಎತ್ತಿಹಿಡಿಯಲು ತಾವು ಸಹ ಕಾಂಗ್ರೆಸಿಗೆ ರಾಜೀನಾಮೆ ನೀಡಿರುವದಾಗಿ ಸ್ಪೀಕರರು ತಿಳಿಸಿದರು.

ವಿಷಸ ಮುಳುಗಿತು

ಜಕಾರ್ತಾದಿಂದ ಬಂದಿರುವ ವಾರ್ತೆಯ ಪ್ರಕಾರ ಭೂಕಂಪದ ದೆಸೆಯಿಂದ ಟೋಲಿ ಟೋಲಿ ಪಟ್ಟಣ ಸಮುದ್ರದೊಳಗೆ ಕುಸಿಯಿತು.

ಭಾರತೀಯರಿಗೆ ತೊಂದರೆ ಇಲ್ಲ

ಜೆಕೋಸ್ಲೋವಿಕಿಯಾದಲ್ಲಿರುವ ಭಾರತೀಯರು ಕ್ಷೇಮದಿಂದ ಇರುವರೆಂದು ಪ್ರೇಗಿನಿಂದ ವಾರ್ತೆ ಬಂದಿದೆ.

ಯುವಕ ಮಂಡಲಿ

ಮೈಸೂರು ರಾಜ್ಯದಲ್ಲಿ ಯುವಕರ ಚಟುವಟಿಕೆಗಾಗಿ ಯುವಕ ಮಂಡಲಿ ರಚನೆಯಾಗಲಿದೆ.

ಕಿವಿ ಕಚ್ಚಿದ

ಶಿಕ್ಷೆಯನ್ನು ಅನುಭವಿಸುತ್ತಿದ್ದ ಸಣ್ಣ ಸೋಮ ಎಂದು ಹೇಳಲಾದ ಅಪರಾಧಿ ಬಳ್ಳಾರಿ ಕಾರಾಗೃಹದಿಂದ ತಪ್ಪಿಸಿಕೊಂಡು ಹೋಗಿ ಅರಣ್ಯ ಸೌಕರರೋರ್ವರ ಕೈಗೆ ಸಿಕ್ಕಿಬಿದ್ದನೆಂದೂ, ಅವರಿಂದ ತಪ್ಪಿಸಿಕೊಳ್ಳುವ ಪ್ರಯತ್ನದಲ್ಲಿ ಅವರ ಕಿವಿ ಕಚ್ಚಿದನೆಂದು ವರದಿಯಾಗಿದೆ.

● ಗುಜರಾತಿನ ಪ್ರವಾಹದಲ್ಲಿ 341 ಜನ ಸತ್ತರು.

॥ ಶುಭಮಸ್ತು ॥

ಶ್ರೀ ವಿಘ್ನೇಶ್ವರನ ದಯೆಯಿಂದ " ಸತ್ಯವಾದಿ " ಗೆ 51 ವರ್ಷಗಳು ತುಂಬಿ 52 ನೇ ವರ್ಷ ಪ್ರಾರಂಭವಾಗಿದೆ.

ಕಳ್ಳತನ ಅಪಾಡನೆ

ಕೊಳ್ಳೇಗಾಲ ತಾಲ್ಲೂಕಿನ ಬಿ. ಜೆ. ಪಾಳ್ಯದ ಗ್ರಾಮದ ವೀರತ್ತಪ್ಪ ಎಂಬವರ ಮನೆಯಲ್ಲಿ ರೂ. 3 ಸಾವಿರ ಬೆಲೆಬಾಳುವ ಭಂಗಾರ ಮತ್ತು ಬೆಳ್ಳಿ ಪದಾರ್ಥಗಳು ಕಳವು ಆಗಿರುವದಾಗಿ ವರದಿಯಾಗಿದೆ.

ಕರಣ ಸಿಂಗರ ನಿರಾಕರಣೆ

ಮುಂದಿನ ತಿಂಗಳು ಶ್ರೀನಗರದಲ್ಲಿ ಜರುಗಬ್ಬುದಿರುವ ರಾಜ್ಯ ಜನತಾ ಸಂಮೇಳನದಲ್ಲಿ ಭಾಗವಹಿಸಲು ಕೇಂದ್ರ ಮಂತ್ರಿಯವರಾದ ಶ್ರೀ ಕರಣಸಿಂಗರು ನಿರಾಕರಿಸಿರುವರು.

● ಧರ್ಮಾತೀತ ಭಾವನೆಗೆ ರಾಷ್ಟ್ರೀಯ ಸ್ವಯಂ ಸೇವಕ ಸಂಘ ವಿರೋಧವಾಗಿಲ್ಲವೆಂದು ಸುಪ್ರೀಂ ನ್ಯಾಯಾಲಯದ ಮಾಜಿ ಶ್ರೇಷ್ಠ ನ್ಯಾಯಾಧೀಶ ಶ್ರೀ ಜೆ. ಸುಬ್ಬರಾವ್ ಬೆಂಗಳೂರಿನಲ್ಲಿ ತಿಳಿಸಿದರು.

ವರನ ಬಂಧನ

ವಿದೇಶದವರ ಕಾನೂನು ಪ್ರಕಾರ ಪಾಕಿಸ್ತಾನದವನೆಂದು ಹೇಳಲಾದ ವ್ಹರನೋರ್ವ ತಾಜಕೋಟಿಯಲ್ಲಿ ಬಂಧಿತನಾದನು. ಮದುವೆ ಆಗಲಿದ್ದಾಗ ಈ ಘಟನೆ ನಡೆಯಿತು. ಪೂರ್ವ ಪಾಕಿಸ್ತಾನದ ಈ ವರನಿಗೆ ಕಹದಾರಿ ಇರಲಿಲ್ಲ.

ನೀವು ನಾಲ್ಕು ಅಂಗಡಿ ಸುತ್ತುವುದೂ ಒಂದೇ ನೆಟ್ಟಿಗೆ ಬ್ಯಾಂಕ್ ರೋಡ್ಕಾ ಬಾಹುಸಾರ್ ಕಂಪನಿಯಲ್ಲಿ ವ್ಯಾಪಾರ ಮಾಡುವುದೂ ಒಂದೇ ಅವರಲ್ಲಿ ಸಾಪ್-ಸೀದಾ ಒಂದೇ ವ್ಯಾಪಾರ. ಒಂದೇ ಬೆಲೆ ಮತ್ತು ನ್ಯಾಯವಾದ ಬೆಲೆ. ಚೌಕಸಿ ಇಲ್ಲ. ಹೆಚ್ಚು ಹೇಳುವುದೂ ಇಲ್ಲ ಕಡಿಮೆ ಕೊಡುವುದೂ ಇಲ್ಲ. ಒಟ್ಟಿನ ಮೇಲೆ ತಲೆನೋವು ಇಲ್ಲದ ವ್ಯಾಪಾರ. ಅಷ್ಟೆ.

ರಷ್ಯದ ಸೇನೆ ವಾಪಸು

ಮಾಸ್ಕೋದಲ್ಲಿ ರಷ್ಯ ಮತ್ತು ಜಕ್ ನಾಯಕರ ನಡುವೆ ಆದ ಒಡಂಬಡಿಕೆಯ ಪ್ರಕಾರ ರಷ್ಯ ಮತ್ತು ಅವರ ಗೆಳೆಯ ರಾಷ್ಟ್ರಗಳ ಸೇನಿಕರು ಜೆಕೋಸ್ಲೋವಿಕಿಯಾದಿಂದ ವಾಪಸಾಗುವರು.

ಐಯ್ಯಪ್ಪ ಜ್ಯೋತಿ

ಕೇರಳದ ಶಬರಮಲೈ ಅಯ್ಯಪ್ಪನವರ ಜ್ಯೋತಿ ಈ ವರ್ಷ ನವೆಂಬರ್ 15 ರಿಂದ ದಕ್ಷಿಣ ಭಾರತದ ಆದ್ಯಂತ ಮೆರವಣಿಗೆ ಹೋಗುವುದು.

ಸೆನೆಟ್ ಸಭೆ

ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಸಭೆ ಮುಂದಿನ ತಿಂಗಳು 28 ರಂದು ಸಮಾವೇಶವಾಗುವುದು.

ನೆಹರು ಕೋಟು

ಅಮೆರಿಕದಲ್ಲಿ ನೆಹರು ಕೋಟು ಹೆಚ್ಚು ಜನಪ್ರಿಯವಾಗಿರುವದೆಂದು ಕಾರ್ಯ ಸಭೆಯಲ್ಲಿ ಉಪ ವಾಣಿಜ್ಯ ಮಂತ್ರಿ ಮಹ್ಮದ್ ಷಫೀ ಖುರೇಷಿ ನಿನ್ನೆ ತಿಳಿಸಿದರು.

ಶವಪೆಟ್ಟಿಗೆ ಎಸೆತ

ಫಿಜಿಯ ಸುವದಲ್ಲಿ 45 ವಯಸ್ಸಿನ ಅಲಿ ಮಹಮದ್ ಎಂಬವನನ್ನು ಮೊನ್ನೆ ಸಮಾಧಿ ಮಾಡಿದರು. ಸಮಾಧಿಯಿಂದ ಶವದ ಪೆಟ್ಟಿಗೆ ಮೊನ್ನೆ ಎಸೆಯಲ್ಪಡಲು ಜನರ ಗಾಭರಿಯಿಂದ ಕಿರುಚಿದರು. ಅನಿಲದ ಸಿಡಿತದಿಂದ ಹೀಗಾಯಿತೆನ್ನಲಾಗಿದೆ. ಅನಂತರ ಬೇರೆ ಕಡೆ ಸಮಾಧಿ ಮಾಡಲಾಯಿತು.

● ವಿಶ್ವದ 32 ನೇ ಹೃದಯ ಬದಲಿ ಚಿಕಿತ್ಸೆಯ 5 ವರ್ಷಸ್ಸಿನ ಸೆರಿಯಾ ಗ್ರಾನ್ಡಾರಿಸ್ ಟೆಕ್ಸಾಸಿನ ಹ್ಯೂಸ್ಟನ್ನಿನಲ್ಲಿ ಹಠಾತ್ತನೆ ಮರಣಹೊಂದಿದಳು.

● ಕಳ್ಳರ ತಂಡದವರೆಂದು ನಂಬಲಾದ 7 ಮಂದಿ ಉತ್ತರ ಭಾರತದ ಮಹಿಳೆಯರನ್ನು ಮದರಾಸಿನಲ್ಲಿ ಬಂಧಿಸಿದೆ.

(2)

● ಕಚ್ಚ್ ಆನಾರ್ಕಿನ ಜಾರಿ ಪ್ರಶ್ನಿಸಿ ಸಲ್ಲಿಸಲಾಗಿದ್ದ ಅರ್ಜಿಯನ್ನು ಸುಪ್ರೀಂ ನ್ಯಾಯಾಲಯ ಡಿಸ್ಮಿಸ್ ಮಾಡಿದೆ.

● ಜೆನೀವ್ಲೀಸಿಕೆಯೂ ಚರ್ಚೆಯಲ್ಲಿ ಭಾರತ ತಟಸ್ಥವಾಗಿದ್ದುದಕ್ಕೆ ಅದರ ಪ್ರತಿನಿಧಿ ವಿಷಾದಿಸಿರುವುದಾಗಿ ನವ ದೆಹಲಿ ವಾರ್ತೆ.

● ಶಾಸನಬದ್ಧ ಪಡಿತರ ಪ್ರದೇಶಗಳಲ್ಲಿಅಕ್ಕಿ ಖೋತಾ ಮಾಡುವದಿಲ್ಲವೆಂದು ಮದರಾಸಿನ ಆಹಾರ ಮಂತ್ರಿ ಶ್ರೀ ಮತಿಯಳಗನ್ ಮದರಾಸಿನಲ್ಲಿ ತಿಳಿಸಿದರು.

● ವೆನಿಸ್ ಚಿತ್ರ ಹಬ್ಬ ಅನಿರ್ದಿಷ್ಟ ಕಾಲಮುಂದಕ್ಕೆ ಹೋಗಿದೆ.

ಸ್ವವಸಾಯ ಚಿತ್ರ

Golden Jubilee of 'Satyavadi'

The golden jubilee of the 'Satyavadi' is to be celebrated very soon.

The President, the Prime Minister, H.H. the Maharaja of Mysore, and other personages have extended messages of felicitations and good wishes. Sri Sringeri, and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basaviah, Sri Madhav henoi, Sri Opera Talkies. Padmabhushana Dr. M. C. Modi, Dr. R. S. Nanjunda Swamy (Glasgow) have generously extended donations and best wishes.

It is welknown that golden jubilee of newspapers in India is rare and almost unknown in Mysore state. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

lity Printing — Neat Binding

Lakshminarasimha Press

Sivarampet, Mysore

ಆಶೋಕೆ ಪಿಚ್ಚರ್ಸ್

ಲಾಸ್ಟ್‌ಡೇ ಬಿಳ್ಳಂಗ್ಸ್, ವೈಡೂರ್ಯ

ಎಲ್ಲ ವಿಧದ ಆಯುರ್ವೇದ ಔಷಧಗಳನ್ನು ಸಿಗುವ ಸ್ಥಳ

ವುಡ್‌ಲಾಂಡ್ಸ್ ಜನವರಿಯ 3 ನೇ ವಾರ

— ಮನಮೋಹಕ ಹಿಂದಿ ಚಿತ್ರ —

= ಘರ್ =

ಈಸ್ಟ್‌ಮನ್ ಕಲರ್

ಪಾತ್ರ — ಜಿತೇಂದ್ರ, ಭಬಿತಾ, ಕಾಂಚನಾ,
ಮುಕ್ರಿ, ಆಗಾ ಮುಂತಾದವರು

ಸಂಗೀತ —
ಲಕ್ಷ್ಮೀಕಾಂತ್ ಪ್ಯಾರೇಲಾಲ್

ಅಪೇರ— ದಿಗ್ವಿಜಯ 8 ನೇ ವಾರ

ಚಿತ್ತಾಕರ್ಷ ಕನ್ನಡ ಚಿತ್ರ

ನ ಮ್ಮ ಊ ರು

ಪಾತ್ರ : ಉದಯ ಕುಮಾರ್ ಅಶ್ವತ್ ಬಾಲಕೃಷ್ಣ ಕೃಷ್ಣಕುಮಾರಿ

Help The Gorakshana

ಗೋರಕ್ಷಣೆಗೆ ಬೆಂಬಲ ನೀಡಿ

ಶ್ರೀದ್ವಾರಕಾ ಜಗದ್ಗುರು ಶಂಕರಾಚಾರ್ಯಸ್ವಾಮಿಗಳವರು ಶ್ರೀ ಶೃಂಗೇರಿ ಜಗದ್ಗುರು
ಮಹಾಸನ್ನಿಧಿಯಲ್ಲಿ ಉದಾರ ಅನುಗ್ರಹ ಕೃಪೆಯಾಗಿದೆ

ಕನ್ನಡನಾಡಿನಲ್ಲಿ ಪೂರ್ಣ ಪ್ರಮಾಣದಲ್ಲಿ ಮದ್ಯನಿಷೇಧ ಜಾರಿಗೆ ಬರಬೇಕು, ಪಶುಹತ್ಯೆ,
ಮಾಂಸದ ಬೆಳೆಗೆ ಕೃಷಿಯ ಪ್ರಮಾಣ ಹೆಚ್ಚಾಗಬೇಕು ; ದರ್ಶನಕ್ಕೆ ಶುಲ್ಕ 50 ಪೈಸೆ

— ಗೋರಕ್ಷಣಾ ವೈದಿಕ ಸಮಿತಿ —

ಗೋರಕ್ಷಣೆಗೆ ಜೀವನಗಳನ್ನೂ ಪ್ರೋತ್ಸಾಹ ಧನವನ್ನೂ
ಹೆಂಡಸರೆಲ್ಲರೂ ಕರವಾಗಿ ಸ್ವೀಕರಿಸಲಾಗುವುದು

ಹೆಂದಾದಾಯಿಂದ ಕಳೆದಾರುವವರು ಇವರಲ್ಲಿ ಹೆಂದಾ ಪಾವತಿಸಬಹುದೆಂದಾಗಿ ವಿನಂತಿ

ಡಾ|| ಪಿ ಎಸ್ ಶಾಂತವಮ್ಮಣ್ಣಿ, ಶ್ರೀ ಪಿಎಸ ವಿಶ್ವನಾಥ್ ಜಯನಗರ, ಬೆಂಗಳೂರು
ಶ್ರೀ ಬಿ ಜಿ ಶಾಸ್ತ್ರಿಗಳು, 1030 ವಿದ್ಯಾರಣ್ಯಪುರ, ಮೈಸೂರು
ಶ್ರೀ ಅನಂತವಲಸೆಅಯ್ಯಂಗಾರ್, ಶಾಸ್ತ್ರಿಧರ್ಮಪ್ರಚಾರಸಭಾ ಹೊಂಗಸಂದ್ರ
ಗೋರಕ್ಷಣಾ ಶಕ್ತಿಸಮ ಸಮಸ್ತಪಾದಿಪ್ರೆಸ್ ಚಾಮರಾಜಪುರಂ ಮೈಸೂರು 4

ವಿಳಾಸ—ಗೋರಕ್ಷಣಾ ಅಭಿಯಾನ 1069 ಚಾಮರಾಜಪುರಂ, ಮೈಸೂರು

Cow Slaughter should be banned Immediately

.....

ಗೋವಧೆ ಕೂಡಲೆ ನಿಷೇಧವಾಗಲಿ

Proteet the Cow

★

ಗೋರಕ್ಷಣೆ ಮಾಡಿ ಸ್ವಾತಂತ್ರ್ಯದ ಅಮೃತಫಲಗಳು ಹೆಚ್ಚಿ ಬಾಳಿರಿ ನಡೆಯಲಿ

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysore-4